**ಸಾಕ್ಷಿಯನ್ನು ದಿಃ 08.08.2024 ರಂದು ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು.**

**ಪಾಟೀ ಸವಾಲುಃ 2 ನೇ ಎದುರುದಾರರ ಪರ ವಕೀಲರಿಂದಃ**

ದೂರಿನಲ್ಲಿ ಯಶವಂತ್ ಮೋಟಾರ್ ಸೈಕಲ್ ಚಾಲನೆ ಮಾಡುತ್ತಿದ್ದು ನನ್ನ ಮಗ ಮತ್ತು ಧನುಷ್ ಹಿಂದೆ ಕುಳಿತುಕೂಂಡು ಹೋಗುತ್ತಿದ್ದರು ಎಂದು ಹೇಳಿರುತ್ತಾರೆ ಎಂದರೆ ಸರಿಯಲ್ಲ. ನಿಪಿ. 6 ದೋಷರೋಪಣಾ ಪಟ್ಟಿಯಲ್ಲಿಯೂ ಸಹ ಯಶವಂತ್ ಮೋಟಾರ್ ಸೈಕಲ್ ಚಾಲನೆ ಮಾಡುತ್ತಿದ್ದು ನನ್ನ ಮಗ ಮತ್ತು ಧನುಷ್ ಹಿಂದೆ ಕುಳಿತುಕೂಂಡು ಹೋಗುತ್ತಿದ್ದರು ಎಂದು ಹೇಳಿರುತ್ತಾರೆ ಎಂದರೆ ಸರಿ. ಅಪಘಾತ ಸಮಯದಲ್ಲಿ ನನ್ನ ಮಗ 9 ನೇ ತರಗತಿಯಲ್ಲಿ ಓದುತ್ತಿದ್ದನು. ಈಗ ಪ್ರಥಮ ಪಿ.ಯು.ಸಿ. ಓದುತ್ತಿದ್ದಾನೆ. ಅಪಘಾತ ಆದ ತಕ್ಷಣ ಮಹದೇಶ್ವರ ನರ್ಸಿಂಗ್ ಹೋಮ್ ಗೆ ಕರೆದುಕೊಂಡು ಹೋಗಿ ನಂತರ ಗೋಪಾಲಗೌಡ ಆಸ್ಪತ್ರೆಗೆ ಕರೆದುಕೊಂಡು ಹೋಗಿರುತ್ತೇವೆ. ಆನಂತರ ನಾರಾಯಣ ಹೃದಯಾಲಯಕ್ಕೆ ಕರೆದುಕೊಂಡು ಹೋಗಿರುತ್ತೇನೆ. ಆ ಬಗ್ಗೆ ದಾಖಲೆ ಹಾಜರು ಪಡಿಸಿರುವುದಿಲ್ಲ ಎಂದರೆ ಸರಿ.

ನಿಪಿ. 8 ರಲ್ಲಿ ಕಾಣಿಸಿರುವ ನನ್ನ ಮಗನ ಜನ್ಮ ದಿನಾಂಕ ಸರಿಯಾಗಿದೆ. ಅಪಘಾತ ಸಮಯದಲ್ಲಿ ನನ್ನ ಮಗನಿಗೆ 15 ವರ್ಷ ವಯಸ್ಸು ಇತ್ತು. ಚಿಕಿತ್ಸೆ ನೀಡಿದ ವೈಧ್ಯರ ಹೆಸರು ಮರೆತು ಹೋಗಿದೆ. ನಾರಾಯಣ ಆಸ್ಪತ್ರೆಯಲ್ಲಿ 12 ದಿನ ದಾಖಲು ಮಾಡಿದ್ದೆ. ನಾರಾಯಾಣ ಆಸ್ಪತ್ರೆಯಲ್ಲಿ ಚಿಕಿತ್ಸೆ ಪಡೆದುಕೊಳ್ಳದೇ ಇರುವ ಕಾರಣ ಯಾವುದೇ ದಾಖಲೆ ಹಾಜರು ಪಡಿಸಿರುವುದಿಲ್ಲ ಎಂದರೆ ಸರಿಯಲ್ಲ. ಕೊನೆಯ ಬಾರಿ ಎರಡು ತಿಂಗಳ ಹಿಂದೆ ನನ್ನ ಮಗನನ್ನು ಆಸ್ಪತ್ರೆಗೆ ಕರೆದುಕೂಂಡು ಹೋಗಿರುತ್ತೇನೆ. ಜೆ.ಎಸ್.ಎಸ್ ಆಸ್ಪತ್ರೆಯಲ್ಲಿ ಉಪಕರಣ ತೆಗೆದಿರುತ್ತಾರೆ. ನನ್ನ ಮಗನಿಗೆ ಯಾವುದೇ ಶಸ್ತ್ರ ಚಿಕಿತ್ಸೆ ಆಗಿರುವುದಿಲ್ಲ ಹಾಗಾಗಿ ಅದಕ್ಕೆ ಸಂಬಂಧಪಟ್ಟ ದಾಖಲೆ ಹಾಜರು ಪಡಿಸಿರುವುದಿಲ್ಲ ಎಂದರೆ ಸರಿಯಲ್ಲ. ನನ್ನ ಮಗ ಈಗಲೂ ಚೆನ್ನಾಗಿ ಓಡಾಡಿಕೊಂಡಿದ್ದಾರೆ ಎಂದರೆ ಸರಿಯಲ್ಲ. ನನ್ನ ಮಗ ಹೋಗುತ್ತಿದ್ದ ಬೈಕ್ ಅನ್ನು ಅಪ್ರಾಪ್ತ ವಯಸ್ಕ ಚಾಲನೆ ಮಾಡುತ್ತಿದ್ದ ಕಾರಣ 2 ನೇ ಎದುರುದಾರರು ಪರಿಹಾರ ನೀಡಲು ಬರುವುದಿಲ್ಲ ಎಂದರೆ ಸರಿಯಲ್ಲ.

ನಿಪಿ. 4 ರಲ್ಲಿ ಕಾಣಿಸುತ್ತಿರುವ ಚಿತ್ರದ ಬಗ್ಗೆ ಗೊತ್ತಾಗುತ್ತಿಲ್ಲ. ಅಪಘಾತ ಆದ ರಸ್ತೆ ನಾಲ್ಕು ರಸ್ತೆ ಕೂಡುವ ಜಂಕ್ಷನ್ ಎಂದರೆ ಸರಿ. ನಿಪಿ. 4 ರಂತೆ ಅಪಘಾತ ರಸ್ತೆಯ ಮಧ್ಯಭಾಗದಲ್ಲಿ ಆಗಿದೆ ಎಂದರೆ ಸರಿಯಲ್ಲ. ರಸ್ತೆಯ ಅಗಲ ನಾಲ್ಕು ದಿಕ್ಕಿನಿಂದ 5 ಮೀಟರ್ ಇರುವ ರಸ್ತೆ ಎಂದರೆ ಸರಿ. ನನ್ನ ಮಗ ಹೋಗುತ್ತಿದ್ದ ಬೈಕ್ ನಂ. ಕೆಎ-20-ಇಕೆ-9159 ಆಗಿರುತ್ತದೆ. ಅಪಘಾತವು ರಸ್ತೆಯ ಅಂಚಿನಿಂದ 2 ಮತ್ತು 3 ಮೀಟರ್ ಗಳಷ್ಟು ದೂರದಲ್ಲಿ ಆಗಿರುತ್ತದೆ ಎಂದರೆ ಆ ಬಗ್ಗೆ ಗೊತ್ತಿಲ್ಲ. ಯಶವಂತ್ ಅಪ್ರಾಪ್ತ ವಯಸ್ಕನಾಗಿದ್ದು ಮೋಟಾರ್ ಸೈಕಲ್ ಚಾಲನೆ ಮಾಡಲು ಬರದೇ ಇರುವ ಕಾರಣ ಆತನ ತಪ್ಪಿನಿಂದಲೇ ಅಪಘಾತ ಆಗಿರುತ್ತದೆ ಎಂದರೆ ಸರಿಯಲ್ಲ.

ಮರುವಿಚಾರಣೆಃ ಇಲ್ಲ

(ನನ್ನ ಹೇಳಿಕೆಯಂತೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು)

ಓ.ಹೇ.ಕೇ.ಸರಿ ಇದೆ.

ಸಹಿ/-

ಹೆಚ್ಚುವರಿ ಲಘು ವ್ಯವಹಾರಗಳ ನ್ಯಾಯಾಧೀಶರು
ಮತ್ತು ಎಂ.ಎ.ಸಿ.ಟಿ., ಮೈಸೂರು.